**ಸಾಕ್ಷಿಯನ್ನು ದಿನಾಂಕ 22-03-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜೆ.ಪಿ.ಎ. ವಕೀಲರಿಂದಃ**

ದಾವಾ ಸರ್ವೆ ನಂಬರ 90 ರಲ್ಲಿ ಒಟ್ಟು ಎಷ್ಟು ಹಿಸ್ಸೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿ 14 ಹಿಸ್ಸೆ ಇವೆ ಎನ್ನುತ್ತಾರೆ. ಒಟ್ಟು ಎಷ್ಟು ಹಿಸ್ಸೆಗಳಿಗೆ ಪಹಣಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಹಿಸ್ಸೆ ನಂಬರ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಹಿಸ್ಸೆ ನಂಬರ 10 ಎನ್ನುತ್ತಾರೆ. ಸದರಿ ಹಿಸ್ಸೆ ನಂಬರ 10 ರ ಪಹಣಿಯಲ್ಲಿ ಯಾರ ಹೆಸರು ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಹಿಸ್ಸೆ ನಂಬರಿಗೆ ಪಹಣಿ ಆಗಿಲ್ಲ ಆದ್ದರಿಂದ ಪಹಣಿ ಮಾಡಿಸುವ ಸಲುವಾಗಿ ಈ ದಾವೆ ಹಾಕಿದ್ದೇನೆ ಎನ್ನುತ್ತಾರೆ. 14 ಹಿಸ್ಸೆಗಳ ಪೈಕಿ ನಿಮ್ಮ ತಂದೆಗೆ ಎಷ್ಟು ಹಿಸ್ಸೆ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ 4 ಹಿಸ್ಸೆ ಬಂದಿತ್ತು ಎನ್ನುತ್ತಾರೆ. ನಿಮ್ಮ ತಂದೆಗೆ ಯಾವ- ಯಾವ ಹಿಸ್ಸೆ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ 90/1 ರಲ್ಲಿ 2 ಎಕರೆ 16 ಗುಂಟೆ, 90/10 ರಲ್ಲಿ 1 ಎಕರೆ 5 ಗುಂಟೆ, 90/14 ರಲ್ಲಿ 19 ಗುಂಟೆ ಮತ್ತು 90/3 ರಲ್ಲಿ 27 ಗುಂಟೆ ಬಂದಿತ್ತು ಎನ್ನುತ್ತಾರೆ.

ಸರ್ವೆ ನಂಬರ 90/3 ರಲ್ಲಿ 27 ಗುಂಟೆ ಜಮೀನು ನಿಮ್ಮ ತಂದೆಗೆ ಬಂದಿತ್ತು ಎಂದು ತೋರಿಸಲು ದಾಖಲೆ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸ.ನಂ.90/1, 90/10 ಮತ್ತು 90/14 ರಲ್ಲಿ ನಿಮ್ಮ ತಂದೆಗೆ ಬಂದ ಜಮೀನನ್ನು ಹೊರತುಪಡಿಸಿ ದಾವಾ ಸರ್ವೆ ನಂಬರ 90 ರಲ್ಲಿನ ಇತರೇ ಯಾವುದೇ ಹಿಸ್ಸೆಯಲ್ಲಿನ ಜಮೀನಿಗೂ ನಿಮಗೂ ಸಂಬಂಧ ಇಲ್ಲ ಎಂದು ಸೂಚಿಸಿದರೆ ಸಾಕ್ಷಿ ಸ.ನಂ.90/9 ರಲ್ಲಿರುವ ದಾವಾ ಸ್ವತ್ತನ್ನು ಪಾಂಡುರಂಗನಿಂದ ಖರೀದಿ ಮಾಡಿದ್ದೇವೆ ಎನ್ನುತ್ತಾರೆ. ಸ.ನಂ.90/10 ರಲ್ಲಿನ ಜಮೀನನ್ನು ನೀವು ಖರೀದಿ ಮಾಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಖರೀದಿ ಮಾಡಿಲ್ಲ ಆದರೆ ಸದರಿ ಸರ್ವೆ ನಂಬರನ ಜಮೀನು ನಮ್ಮ ತಂದೆಗೆ ಬಂದಿದೆ ಎನ್ನುತ್ತಾರೆ.

ನಿಮ್ಮ ತಂದೆ ಬದುಕಿದ್ದಾಗ ಸ.ನಂ.90/1, 90/10 ಮತ್ತು 90/14 ರಲ್ಲಿನ ಜಮೀನನ್ನು ಯಾರಿಗಾದರೂ ಮಾರಾಟ ಮಾಡಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಬದುಕಿದ್ದಾಗ ಸ.ನಂ.90/1 ರ ಜಮೀನನ್ನು ಭೀಮಣ್ಣ ಪಾತರಪಳ್ಳಿಗೆ ಮಾರಾಟ ಮಾಡಿದ್ದ ಎಂದು ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಉಳಿದ ಎರಡು ಹಿಸ್ಸೆಗಳಲ್ಲಿ ತನಗೆ ಬಂದಿದ್ದ ಜಮೀನುಗಳನ್ನು ನಿಮ್ಮ ತಂದೆ 1970-71 ನೇ ಇಸವಿಯಲ್ಲಿ ಪಾಂಡುರಂಗ ತಂದೆ ಮಾಣಯ್ಯನಿಗೆ ಮಾರಾಟ ಮಾಡಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿ ಯಾರಿಗೂ ಮಾರಾಟ ಮಾಡಿಲ್ಲ ನಾವೇ ಅದರ

ಕಬ್ಜೆಯಲ್ಲಿದ್ದೇವೆ ಎನ್ನುತ್ತಾರೆ.

ಸ.ನಂ.90/8 ರಲ್ಲಿರುವ ಜಮೀನಿಗೂ ನನ್ನ ತಂದೆಗೂ ಸಂಬಂಧ ಇಲ್ಲ ಎಂದರೆ ಸರಿ. ಸರ್ವೆ ನಂಬರ 90/8 ರಲ್ಲಿ ಎಷ್ಟು ಎಕರೆ ಅಥವಾ ಗುಂಟೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಂಬರ 90/8 ರಲ್ಲಿ 4 ಗುಂಟೆ ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ಸರ್ವೆ ನಂಬರ 90/14 ಮತ್ತು 90/10 ರ ಜಮೀನನ್ನು 1970-71 ನೇ ಸಾಲಿನಲ್ಲಿ ಪಾಂಡುರಂಗನಿಗೆ ಮಾರಾಟ ಮಾಡಿದ್ದರು ಮತ್ತು ಸದರಿ ಮಾರಾಟದ ಸಂದರ್ಭದಲ್ಲಿ 90/10 ರ ಜಮೀನಿನ ಹಿಸ್ಸೆ ನಂಬರನ್ನು 90/8 ಎಂದು ತಪ್ಪಾಗಿ ನಮೂದಿಸಲಾಗಿತ್ತು ಎನ್ನುವುದು ಸರಿಯಲ್ಲ. ಸರ್ವೆ ನಂಬರ 90/14 ರಲ್ಲಿ 19 ಗುಂಟೆ ಮತ್ತು ಸರ್ವೆ ನಂಬರ 90/10 ರಲ್ಲಿ 1 ಎಕರೆ 25 ಗುಂಟೆ, ಒಟ್ಟು ಕೇವಲ 1 ಎಕರೆ 34 ಗುಂಟೆ ಜಮೀನು ಮಾತ್ರ ಇದ್ದರು ಸಹ ನನ್ನ ತಂದೆ ಸದರಿ ಹಿಸ್ಸಾಗಳಲ್ಲಿನ ಜಮೀನನ್ನು ಪಾಂಡುರಂಗನಿಗೆ ಮಾರಾಟ ಮಾಡುವಾಗ ಎರಡು ಹಿಸ್ಸೆಗಳಲ್ಲೂ ತಲಾ ಒಂದೊಂದು ಎಕರೆ ಜಮೀನು ಇದೆ ಎಂದು ತಪ್ಪಾಗಿ ತೋರಿಸಿ ಒಟ್ಟು 2 (ಎರಡು) ಎಕರೆ ಜಮೀನನ್ನು ಮಾರಾಟ ಮಾಡಿದ್ದ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತು ನಿಮಗೆ ಹೇಗೆ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ನಾನು ಖರೀದಿ ಮಾಡಿದ್ದೆ ಎನ್ನುತ್ತಾರೆ. ಯಾರಿಂದ ಖರೀದಿ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಪಾಂಡುರಂಗ ತಂದೆ ಮಾಣಯ್ಯ ಎಂಬುವವರಿಂದ ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ಪಾಂಡುರಂಗ ತಂದೆ ಮಾಣಯ್ಯ ಎಂಬಾತ ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪಾಂಡುರಂಗ ತಂದೆ ಮಾಣಯ್ಯ ಎಂಬ ವ್ಯಕ್ತಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟವನಲ್ಲ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ದಾವಾ ಸ್ವತ್ತನ್ನು ಪಾಂಡುರಂಗನಿಂದ ನನ್ನ ಅಣ್ಣ ಬಿಕ್ಕುವಿನ ಹೆಸರಿಗೆ ಖರೀದಿ ಮಾಡಲಾಗಿತ್ತು ಎನ್ನುತ್ತಾರೆ. ದಾವಾ ಸ್ವತ್ತನ್ನು ಪಾಂಡುರಂಗನಿಂದ ನನ್ನ ಅಣ್ಣ ಬಿಕ್ಕುವಿನ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂದು ತೋರಿಸಲು ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಪಾಂಡುರಂಗನಿಂದ ಬಿಕ್ಕುವಿನ ಹೆಸರಿಗೆ ಯಾವ ಹಿಸ್ಸೆ ನಂಬರಿನ ಜಮೀನು ಖರೀದಿ ಮಾಡಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂಬರ 90/9 ರಲ್ಲಿನ ಜಮೀನು ಖರೀದಿ ಮಾಡಲಾಗಿತ್ತು ಎನ್ನುತ್ತಾರೆ.

ನನ್ನ ತಂದೆ ಗಂಗುನಾಯಕ ಮತ್ತು ಪ್ರತಿವಾದಿಯ ತಂದೆ ಚಂದುನಾಯಕನ ನಡುವಿನ ಪಾಲು ವಿಭಾಗದಲ್ಲಿ ಸರ್ವೆ ನಂಬರ 90/9 ರಲ್ಲಿದ್ದ ಜಮೀನು ಪ್ರತಿವಾದಿಯ ತಂದೆ ಚಂದು ನಾಯಕನ ಪಾಲಿಗೆ ಬಂದಿತ್ತು ಎಂದು ಸೂಚಿಸಿದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಬರ 90/2, 90/9

ಮತ್ತು 90/11 ರಲ್ಲಿನ ಜಮೀನುಗಳು ಪ್ರತಿವಾದಿ ತಂದೆ ಚಂದುನಾಯಕನ ಹೆಸರಿಗೆ ಇತ್ತು ಎಂದು ಸೂಚಿಸಿದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಬರ 90/9 ರ ಜಮೀನನ್ನು ಮಾಣೆಯ್ಯ ಖರೀದಿ ಮಾಡಿದ್ದ ಎಂದು ತೋರಿಸಲು ದಾಖಲೆ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಎಲ್ಲಾ ದಾಖಲೆ ಡಿಸ್ಟ್ರಿಕ್ ಕೋರ್ಟ ಮತ್ತು ಹೈ-ಕೋರ್ಟನಲ್ಲಿದೆ ಹಾಗಾಗಿ ಕೊಟ್ಟಿಲ್ಲ ಎನ್ನುತ್ತಾರೆ. ಸರ್ವೆ ನಂಬರ 90/9 ರ ಜಮೀನನ್ನು ಮಾರಾಟ ಮಾಡಲು ಮಾಣಯ್ಯನಿಗೆ ಯಾವುದೇ ಅಧಿಕಾರ ಇರಲಿಲ್ಲ ಎನ್ನುವುದು ಸುಳ್ಳು.

ಗಂಗು ತಂದೆ ಸಕ್ರು ಎಂಬುದು ನಿಮ್ಮ ತಂದೆಯ ಹೆಸರು ಹೌದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಾಯಿ ಹೆಸರು ಪ್ರೇಮಿಲಿಬಾಯಿ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಸರ್ವೆ ನಂಬರ 90 ರಲ್ಲಿ ಅವರ ಪಾಲಿಗೆ ಬಂದಿದ್ದ ಮೂರು ಹಿಸ್ಸೆಗಳಲ್ಲಿನ ಜಮೀನನ್ನು ಮಾರಾಟ ಮಾಡಿದ್ದರು ಹಾಗಾಗಿ ಸದರಿ ಸರ್ವೆ ನಂಬರನಲ್ಲಿ ಈಗ ನನಗೆ ಯಾವುದೇ ಜಮೀನು ಉಳಿದುಕೊಂಡಿಲ್ಲ ಎನ್ನುವುದು ಸರಿಯಲ್ಲ. ಸರ್ವೆ ನಂಬರ 90/9 ರಲ್ಲಿ ನಮ್ಮ ತಂದೆ ಪಾಲಿಗೆ ಬಂದಿರುವ ಅಥವಾ ನನಗೆ ಸೇರಿದ ಯಾವುದೇ ಜಮೀನು ಇಲ್ಲದಿದ್ದರು ಸಹ ಕಂದಾಯ ಅಧಿಕಾರಿಗಳನ್ನು ಶ್ಯಾಮಿಲು ಮಾಡಿಕೊಂಡು ಸದರಿ ಜಮೀನಿಗೆ ಸಂಬಂಧಪಟ್ಟ ಪಹಣಿಯನ್ನು ಸೃಷ್ಠಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

ಸರ್ವೆ ನಂಬರ 90/9 ರಲ್ಲಿದ್ದ ಜಮೀನು ಶಾದಿಪೂರ ಕೆರೆಯಲ್ಲಿ ಮುಳುಗಡೆಯಾದ ಸಂದರ್ಭದಲ್ಲಿ ಸದರಿ ಜಮೀನಿನ ಪಹಣಿ ನನ್ನ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಸದರಿ ಮುಳುಗಡೆ ಸಂಬಂಧ ನನ್ನ ಹೆಸರಿಗೆ ರೂ.99,000/- ಭೂ-ಸ್ವಾಧೀನ ಪರಿಹಾರ ಹಣ ಬಂದಿತ್ತು ಎಂದರೆ ಸರಿ. ಸದರಿ ಹಣವನ್ನು ನನಗೆ ಬಿಡುಗಡೆ ಮಾಡಬಾರದು ಎಂದು ಪ್ರತಿವಾದಿ ಭೂ-ಸ್ವಾಧೀನ ಅಧಿಕಾರಿಗಳ ಮುಂದೆ ತಕರಾರು ಕೊಟ್ಟಿದ್ದ ಎಂದರೆ ಸರಿ. ಸದರಿ ತಕರಾರಿನ ಆಧಾರದ ಮೇರೆಗೆ ಪರಿಹಾರದ ಹಣದ ಕುರಿತಾತ ವ್ಯಾಜ್ಯವನ್ನು ಭೂ-ಸ್ವಾಧೀನ ಅಧಿಕಾರಿಗಳು ಚಿಂಚೋಳಿಯ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸಿದ್ದರು ಎಂದರೆ ಸರಿ. ಹಿರಿಯ ಸಿವಿಲ್ ನ್ಯಾಯಾಲಯವು ಪರಿಹಾರದ ಪೂರಾ ಹಣವನ್ನು ಪ್ರತಿವಾದಿ ಕೊಡಬೇಕೆಂದು ಆದೇಶ ಮಾಡಿತ್ತು ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಪ್ರತಿವಾದಿ ಪರಿಹಾರದ ಹಣವನ್ನು ಪಡೆದುಕೊಂಡಿದ್ದಾನೆ ಎನ್ನುವುದು ಸರಿಯಲ್ಲ. ಪರಿಹಾರದ ಹಣವನ್ನು ಹೆಚ್ಚಿಸಬೇಕು ಎಂದು ನಾನು ಪುನಃ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದೆ ಎಂದರೆ ಸರಿ. ಸದರಿ ಅರ್ಜಿ ಪುರಸ್ಕಾರಗೊಂಡು ಎಕರೆಗೆ ರೂ.1,99,000/- ಪರಿಹಾರ ಕೊಡಬೇಕು ಎಂದು ಆದೇಶ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಹೆಚ್ಚುವರಿ ಪರಿಹಾರದ ಹಣವನ್ನು ತನಗೆ ಕೊಡಬೇಕು ಎಂದು ಪ್ರತಿವಾದಿ

ತಕರಾರು ಹಾಕಿದ್ದ ಎಂದರೆ ಸರಿ. ಸದರಿ ಅರ್ಜಿ 2015 ರಲ್ಲಿ ಪುರಸ್ಕಾರಗೊಂಡು ಹೆಚ್ಚುವರಿ ಪರಿಹಾರದ ಹಣವನ್ನು ಸಹ ಪ್ರತಿವಾದಿಗೆ ಕೊಡಬೇಕು ಎಂದು ನ್ಯಾಯಾಲಯದಲ್ಲಿ ಆದೇಶ ಆಗಿತ್ತು ಎಂದರೆ ಸರಿ. ಸದರಿ ಆದೇಶ ಆದ 8 ವರ್ಷಗಳ ನಂತರ ನಾನು ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆ ಎಂದು ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮೇಲ್ಮನವಿ ಸಹ ವಜಾ ಆಗಿದೆ ಎಂದರೆ ಸಾಕ್ಷಿ ನಾನು ಹೈ-ಕೋರ್ಟನಲ್ಲಿ ಕೇಸು ಮಾಡಿದ್ದೇನೆ ಎನ್ನುತ್ತಾರೆ.

ನನ್ನ ತಂದೆ-ತಾಯಿಗೆ 6 ಜನ ಗಂಡು ಮಕ್ಕಳು. ನನ್ನ ಅಣ್ಣಂದಿರೆಲ್ಲ ಸೇರಿ ನನ್ನ ಮತ್ತು ಇತರರ ವಿರುದ್ಧ ನಮ್ಮ ತಂದೆ ಪಾಲಿಗೆ ಬಂದಿದ್ದ ಸರ್ವೆ ನಂಬರ 90/1, 90/10 ಮತ್ತು 90/14 ರ ಜಮೀನಿಗೆ ಸಂಬಂಧಪಟ್ಟಂತೆ ಒಂದು ದಾವೆ ಹಾಕಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ನನ್ನ ಅಣ್ಣಂದಿರ ಪರವಾಗಿ ತೀರ್ಪು ಬಂದಿತ್ತು ಎಂದು ಸೂಚಿಸಿದರೆ ಸಾಕ್ಷಿ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆ ಎನ್ನುತ್ತಾರೆ. ಸದರಿ ಮೇಲ್ಮನವಿಯನ್ನು ನಾನು ಸಲ್ಲಿಸಿಲ್ಲ ಬದಲಾಗಿ ಪ್ರತಿವಾದಿ ಮತ್ತು ಇತರರು ಸಲ್ಲಿಸಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ಮೇಲ್ಮನವಿ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ.

ಭೂ-ಸ್ವಾಧೀನ ಪರಿಹಾರದ ಹಣದ ಸಂಬಂಧ ನಡೆದಿದ್ದ ಎಲ್.ಎ.ಸಿ. ನಂಬರ 160/2009 ರ ಅರ್ಜಿಯಲ್ಲಿ ನಾನು ಸರ್ವೆ ನಂಬರ 90/9 ರಲ್ಲಿನ ಜಮೀನು ಪ್ರತಿವಾದಿಗೆ ಸಂಬಂಧಪಟ್ಟಿದ್ದು ಅದರಲ್ಲಿ ನನಗೆ ಯಾವುದೇ ಸಂಬಂಧ ಇಲ್ಲ ಎಂದು ಮೆಮೊ ಹಾಕಿದ್ದೆ ಎನ್ನುವುದು ಸುಳ್ಳು. ದಾವಾ ಸ್ವತ್ತಿನಲ್ಲಿ ನನಗೆ ಅಥವಾ ನನ್ನ ಅಣ್ಣ-ತಮ್ಮಂದಿರಿಗೆ ಯಾವುದೇ ರೀತಿಯಲ್ಲೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ ಪಾಲಿಗೆ ಬಂದಿದ್ದ ಎಲ್ಲಾ ಜಮೀನನ್ನು ಅವರು ತಮ್ಮ ಜೀವಿತಾವಧಿಯಲ್ಲಿ ಮಾರಾಟ ಮಾಡಿದ್ದರು ಸಹ ಫಾರಂ ನಂಬರ 10 ರಲ್ಲಿ ನನ್ನ ತಂದೆಯ ಹೆಸರು ಈಗಲೂ ಚಾಲ್ತಿಯಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆ ಹಾಕಿದ್ದೇನೆ ಎನ್ನುವುದು ಸರಿಯಲ್ಲ.

ನಿಮ್ಮ ತಂದೆಯ ಪಾಲಿಗೆ ಬಂದಿದ್ದ ಆಸ್ತಿಗಳನ್ನು ನೀವು ಮತ್ತು ನಿಮ್ಮ ಸಹೋದರರು ಹಂಚಿಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಹಂಚಿಕೊಂಡಿದ್ದೇನೆ ಎನ್ನುತ್ತಾರೆ. ಯಾವಾಗ ಹಂಚಿಕೊಂಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಈಗ್ಗೆ 25-30 ವರ್ಷಗಳ ಹಿಂದೆ ಹಂಚಿಕೊಂಡಿದ್ದೇವೆ ಎನ್ನುತ್ತಾರೆ. ಸದರಿ ಪಾಲು ವಿಭಾಗದಲ್ಲಿ ಯಾರ್ಯಾರಿಗೆ ಎಷ್ಟು ಜಮೀನು ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಯಾರೂ ಹಂಚಿಕೊಂಡಿಲ್ಲ ಪೂರಾ ಆಸ್ತಿಯನ್ನು ನಾನೇ ಸಾಗುವಳಿ ಮಾಡುತ್ತಿದ್ದೇನೆ ಎನ್ನುತ್ತಾರೆ.

ನಿಮ್ಮ ಅಣ್ಣ-ತಮ್ಮಂದಿರ ಪಾಲನ್ನು ಸಹ ನೀವೇ ಸಾಗುವಳಿ ಮಾಡುತ್ತಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಅವರೇಲ್ಲ ಬಾಂಬೆ-ಪೂನಾದಲ್ಲಿ ಕೆಲಸ ಮಾಡುತ್ತಿದ್ದಾರೆ ಹಾಗಾಗಿ ನಾವು ಜಮೀನು ಪಾಲು ಮಾಡಿಕೊಂಡಿಲ್ಲ, ಜಮೀನನ್ನು ನಾನೇ ಸಾಗುವಳಿ ಮಾಡಿ ಅದರಲ್ಲಿ ಬೆಳೆದ ಉತ್ಪನ್ನಗಳಲ್ಲಿ ಸ್ವಲ್ಪ ಪಾಲನ್ನು ನನ್ನ ಅಣ್ಣ-ತಮ್ಮಂದಿರಿಗೆ ಕೊಡುತ್ತೇನೆ ಎನ್ನುತ್ತಾರೆ. ನನ್ನ ಅಣ್ಣ-ತಮ್ಮಂದಿರು ಮತ್ತು ನನ್ನ ನಡುವೆ ಕಳೆದ 12-15 ವರ್ಷಗಳಿಂದ ಮಾತುಕತೆ ಇಲ್ಲ ಎನ್ನುವುದು ಸುಳ್ಳು. ನನ್ನ ಅಣ್ಣ-ತಮ್ಮಂದಿರ ಜೊತೆ ನಾನು ಒಳ್ಳೆ ಸಂಬಂಧ ಇಟ್ಟುಕೊಳ್ಳದೆ ಇರುವುದರಿಂದಲೇ ಅವರು ನನ್ನ ವಿರುದ್ಧ ಪಾಲು ವಿಭಾಗಕ್ಕಾಗಿ ದಾವೆ ಹಾಕಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿ ದಾವೆ ಹಾಕಿದ್ದರು ಈಗ ಎಲ್ಲರು ಚೆನ್ನಾಗಿದ್ದೇವೆ ಎನ್ನುತ್ತಾರೆ. ಈಗ ಎಲ್ಲರು ಚೆನ್ನಾಗಿದ್ದೇವೆ ಎಂದು ಈ ದಾವೆ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ದಾವೆಯಲ್ಲಿನ ಸ್ವತ್ತಿನ ಸಂಬಂಧವಾಗಿ ನಾನು ಈ ಹಿಂದೆ ಪ್ರತಿವಾದಿ ಮತ್ತು ಇತರೇ 9 ಜನರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಶಾಶ್ವತ ನಿರ್ಭಂಧಕಾಜ್ಞೆಗಾಗಿ ದಾವೆ ಹಾಕಿದ್ದೆ ಎಂದು ಸೂಚಿಸಿದರೆ ಸಾಕ್ಷಿ ನಾನು ಹಾಕಿಲ್ಲ ನನ್ನ ಅಣ್ಣ-ತಮ್ಮಂದಿರು ಹಾಕಿದ್ದಾರೆ ಎನ್ನುತ್ತಾರೆ. ನಾನೇ ಹಾಕಿದ್ದ ಸದರಿ ದಾವೆ ವಜಾ ಆಗಿದೆ ಎಂದರೆ ಸಾಕ್ಷಿ ವಜಾ ಆದ ಬಗ್ಗೆ ನನಗೆ ಗೊತ್ತಿಲ್ಲ ಪಹಣಿ ಸಲುವಾಗಿ ಈ ದಾವೆ ಹಾಕಿದ್ದೇನೆ ಎನ್ನುತ್ತಾರೆ. ದಾವಾ ಜಮೀನು ನನಗೆ ಸಂಬಂಧಿಸಿದೆ ಮತ್ತು ಅದರ ಪಹಣಿ ಸಲುವಾಗಿ ಈ ದಾವೆ ಹಾಕಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪ್ರತಿವಾದಿಗೆ ಸತಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**